ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 16-21
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಕಥ ಕಥ ಕಥಾಸಂಕಲನದಲ್ಲಿನ ಶೋಧ ಕ್ರಿಯೆ

**ಅಕ್ಷಿತ ಎಂ.ಎಂ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ,
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Abstract:**

*ಕನ್ನಡದ ಪ್ರಮುಖ ಸೃಜನಶೀಲ ಬರಹಗಾರರಲ್ಲಿ ಕೇಶವ ಮಳಗಿ ಅವರು ಒಬ್ಬರು. ಇವರು ಮೂಲತಃ ಬಳ್ಳಾರಿ ಜಿಲ್ಲೆಯವರು. ಪ್ರಸ್ತುತ ಬೆಂಗಳೂರಿನ ಸೃಷ್ಟಿ ಇನ್ಸಿಟ್ಯೂಟ್ ಆಫ್ ಆರ್ಟ್ ಡಿಸೈನ್ ಅಂಡ್ ಟೆಕ್ನಾಲಜಿಯಲ್ಲಿ ಬೋಧಕರಾಗಿ ಕಾರ್ಯನಿರ್ವಹಿ ನಿವೃತ್ತಿ ಹೊಂದಿದ್ದಾರೆ. 80ರ ದಶಕದಲ್ಲಿ ಬರವಣಿಗೆ ಆರಂಭಿಸಿದ ಇವರು ಕಥೆ, ಕಾದಂಬರಿ, ಅನುವಾದ ಕೃತಿಗಳನ್ನು ಒಳಗೊಂಡಂತೆ ಸುಮಾರು 25ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಆದರೆ ಇವರಿಗೆ ಬಹಳ ಪ್ರಿಯವಾದದ್ದು ಕಥನ ಮಾರ್ಗ. ಅಪ್ತವಾಗಿ ಓದಿಸಿಕೊಳ್ಳುವ ಇವರ ಕಥೆಗಳು ಮನುಷ್ಯರ ಸಂಕೀರ್ಣ ಸಂಬಂಧಗಳು, ನಿರ್ಧಾರದ ಅಸ್ಪಷ್ಟತೆ, ಗೊಂದಲದ ದಾಂಪತ್ಯ ಜೀವನದ ಸರಸ ವಿರಸ, ಪ್ರೇಮ ನಿವೇದನೆ, ಬಡತನ, ಶೋಷಣೆ, ರಾಜಕೀಯ ಮತ್ತು ಆರ್ಥಿಕತೆಯ ಒಳನೋಟಗಳು ಹಾಗೂ ಡೋಂಗಿತನದ ಬೂಟಾಟಿಕೆಯ ಬದುಕು ಹೀಗೆ ವಿವಿಧ ಮಜಲುಗಳ ಮೇಲೆ ಬೆಳಕು ಚೆಲ್ಲುತ್ತದೆ. ಪ್ರಸ್ತುತ ಲೇಖನದಲ್ಲಿ ಕೇಶವ ಮಳಗಿಯವರ 'ಅಕಥ ಕಥಾ' ಕಥಾ ಸಂಕಲನ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕಥಾ ಸಂಕಲನ, ಅಕಥ ಕಥ, ಕೇಶವ ಮಳಗಿ.*

## ಪೀಠಿಕೆ

ಕೇಶವ ಮಳಗಿಯವರ 'ಅಕಥ ಕಥಾ' ಕಥಾ ಸಂಕಲನವು 2021 ರಲ್ಲಿ ಪ್ರಕಟವಾದ ಕೃತಿ. ಇಲ್ಲಿನ ಕಥೆಗಳು ಗ್ರಾಮೀಣ ಸಮಾಜದ ಸಾಂಸ್ಕೃತಿಕ ಜೀವನಶೈಲಿಯ ಪಲ್ಲಟಗಳನ್ನು ಮತ್ತು ಸಮಕಾಲೀನ ಸೂಕ್ಷ್ಮತೆಗಳನ್ನು ಓದುಗರ ಮುಂದೆ ತೆರೆದಿಡುತ್ತದೆ. ಹಾಗೆಯೇ ಮನುಷ್ಯ ಸಂಬಂಧಗಳ ಸಂಕೀರ್ಣತೆಯನ್ನು ಪರಿಶೀಲಿಸುತ್ತಾ ಸರಿ–ತಪ್ಪುಗಳ ನೆಲೆಯಿಂದಾಚೆಗೆ ಹೋಗಿ ಸಂಬಂಧಗಳಲ್ಲಿನ ಗೋಜಲುಗಳನ್ನು ನಿರ್ಮಿಸಿಕೊಂಡವರು ಅದರಿಂದ ಅನುಭವಿಸುವ ತಾಕಲಾಟಗಳನ್ನು ಇಲ್ಲಿನ ಪಾತ್ರಗಳ ಮೂಲಕ ಹಿಡಿದಿಡಲಾಗಿದೆ. ಈ ಕಥೆಗಳನ್ನು ಓದಿದಾಗ ಕಾಡುವ ಪ್ರಶ್ನೆ ನಮ್ಮ ಸ್ವಭಾವ ನಮಗೆ ನಿಜವಾಗಿಯೂ ಅರ್ಥವಾಗುತ್ತದೆಯೇ ಅರ್ಥಮಾಡಿ ಕೊಳ್ಳುವಲ್ಲಿ ನಾವು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇವೆಯೆ. ನಮ್ಮನ್ನು ನಾವು ಗೆದ್ದೆವೆಂದು, ಮೀರಿದ್ದೇವೆಂದು ತಿಳಿದುಕೊಂಡಾಗಲು ಅದೆಷ್ಟು ಸಫಲ ಕಂಡಿದ್ದೇವೆ. ಈ ರೀತಿ ಪ್ರಶ್ನೆಗಳು ಕೇಳಿಕೊಳ್ಳುವಂತೆ ಮಾಡುತ್ತದೆ.

ಶೋಧ ಅಥವಾ ಹುಡುಕಾಟ ಈ ಸಂಕಲನದ ಕೇಂದ್ರಬಿಂದು. ಇಲ್ಲಿನ ಕಥೆಗಳ ಸ್ಥಾಯಿ ಭಿತ್ತಿಯು ಹೌದು. ಸಮಾಜದ ಕ್ಲಿಷ್ಟ ಕಠೋರತೆಯಿಂದ ಬಿಡಿಸಿಕೊಳ್ಳಲು ಬಯಸುವ ಇಲ್ಲಿನ ನಿಸ್ಸಹಾಯಕ

**Please cite this article as:** ಅಕ್ಷಿತ ಎಂ.ಎಂ. (2025). ಅಕಥ ಕಥ ಕಥಾಸಂಕಲನದಲ್ಲಿನ ಶೋಧ ಕ್ರಿಯೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(2), 16–21

ಪಾತ್ರಗಳಿಗೆ ಬೆಳಕ ತೋರಲೆಂಬಂತೆ ಇದಕ್ಕಿದ್ದ ಹಾಗೆ ಅಪರಿಚಿತ ಪಾತ್ರಗಳು ಬಂದು ಹೋಗುತ್ತವೆ. ಈ ಪಾತ್ರಗಳು ಮಿಂಚಿನಂತೆ ಕ್ಷಣಿಕವೆನಿಸಿದರೂ ಮುಖ್ಯ ಪಾತ್ರಗಳೊಂದಿಗೆ ಸ್ಥಿರವಾಗಿ ನಿಲ್ಲುತ್ತವೆ. ಕಥೆಯ ಆರಂಭದಲ್ಲಿ ಕಾಣಿಸಿಕೊಳ್ಳುವ ಬದುಕಿನ ಸಮಸ್ಯೆಗಳು ಕಥೆ ಅಂತ್ಯ ತಲುಪುವುದರೊಳಗೆ ಹೊಸ ಭರವಸೆಯೊಂದಿಗೆ ಹಲವಾರು ಆಯಾಮಗಳನ್ನು ಪಡೆದು ಮುಕ್ತಾಯವಾಗುತ್ತದೆ.

ಕಥೆಯ ಕೊನೆ ಕೊನೆಗೆ ಬದುಕಿನ ನಿರರ್ಥಕತೆ ಇದೆ. ಮುಂದುವರೆದು ಸಂಕಲನದ ಉದ್ದಕ್ಕೂ ಅಂತರಂಗವನ್ನು ಮೀರಿದ ಇನ್ಯಾವುದೊ ಅನೂಹ್ಯ ಚೈತನ್ಯದ ಹುಡುಕಾಟವಿದೆ. ಕೌಟುಂಬಿಕ ನೆಲೆಯಲ್ಲಿ ಸಂಕೀರ್ಣ ಸಂಬಂಧಗಳು ಉಂಟುಮಾಡುವ ಜಟಿಲತೆ ಮತ್ತು ಸಂಕಷ್ಟಗಳಿಂದ ಬಿಡಿಸಿಕೊಂಡು ಜೀವನ ಪುನರ್ ಕಟ್ಟುವ ಬಗೆ ಹೇಗೆಂಬುದು ಕಥೆಯಲ್ಲಿ ಸೂಚ್ಯವಾಗಿದೆ. ತೀರ ಸಾಮಾನ್ಯ ವರ್ಗದವರ ಬದುಕು ಕುಸಿದು ಹೋದಾಗ ಮಾನವೀಯತೆ, ಅನುಕಂಪ, ಅಂತಃಕರಣ ತುಂಬಿದ ನಡವಳಿಕೆಯಿಂದ ಒಬ್ಬರು ಮತ್ತೊಬ್ಬರ ಜೀವನವನ್ನು ಉನ್ನತಕೇರಿಸುವ ಪ್ರಯತ್ನ ಮಾಡಬೇಕು. ಇದರಿಂದ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ. ಅಂದರೆ ಈ ಸಮಾಜದಲ್ಲಿ ಮನುಷ್ಯರ ನಡಾವಳಿಗಳು ಮತ್ತು ಮಾನವೀಯ ಮೌಲ್ಯಗಳು ಮುಖ್ಯವಾಗುತ್ತವೆ ಎಂಬುದನ್ನು ಇಲ್ಲಿನ ಕಥೆಗಳು ಧ್ವನಿಸುತ್ತವೆ.

ಇಲ್ಲಿನ ಕಥೆಗಳ ನಡುವೆ ಅಂತರ ಸಂಬಂಧವಿದ್ದು ಜಾತ್ರೆ, ಪಯಣ, ಹುಡುಕಾಟ ಪದೇಪದೇ ಕಾಣಿಸಿಕೊಳ್ಳುವ ಸಾಧು ಇವು ಕಥೆ ಉದ್ದಕ್ಕೂ ಮರುಕಳಿಸುತ್ತವೆ. 'ಅಕಥ ಕಥಾ' ನಾಯಕ ಪ್ರಮೋದ, ಬಾರೋ ಗೀಚಕದ ಪ್ರೊಫೆಸರ್ ಕದಂ ಮತ್ತು ನೀಲಾಂಜನ ಚಟರ್ಜಿ, ವಾಸುದೇವ, ಮಾಘ ಮಾಸದ ಇಳಿ ಸಂಜೆಯ ಕಥಾನಾಯಕ ಎಲ್ಲರದು ಹುಡುಕಾಟವೆ. ಬದುಕಿನಲ್ಲಿ ಸೃಷ್ಟಿಸುವ ಕೃತಕ ಬೇಲಿಗಳನ್ನು ಧಿಕ್ಕರಿಸಿ ವಾಸ್ತವತೆಯತ್ತ ಮುಖಮಾಡುವುದನ್ನು ಇಲ್ಲಿ ನೋಡಬಹುದು. ಕಥೆಯ ಆಳಕ್ಕಿಳಿದಂತೆಲ್ಲ ವ್ಯಕ್ತಿ ಕೇಂದ್ರಿತ ನೆಲೆಯಲ್ಲಿ ಸಾಗುವ ಪಾತ್ರಗಳು ಮುಂದೆ ಸಮಕಾಲಿನ ಸಮಾಜದ ದರ್ಶನವನ್ನು ಮಾಡಿಸುತ್ತವೆ. ಬಾಬಣ್ಣನ ಸಂಸಾರದಲ್ಲಿ ಅನುಭವಿಸಿದ ದುಃಖಗಳನ್ನೆಲ್ಲ ನೀಗಿಸಿಕೊಳ್ಳಲು ಬಾಬಾ ಆಗಿ ಅಲೆದಾಡುವುದು, ಚಂದ್ರವ್ವ ಕಣ್ಮರೆಯಾಗಿರುವ ಗಂಡನನ್ನು ಹುಡುಕಲು ಮೌನೇಶನ ಜಾತ್ರೆಗೆ ಬರುವುದು, ಜೀತದಲ್ಲಿ ಬಳಲುತ್ತಿರುವ ಮೊಮ್ಮಗನನ್ನು ಬಿಡಿಸಿಕೊಳ್ಳಲು ಭಿಕ್ಷೆ ಎತ್ತಲು ಜಾತ್ರೆಗೆ ಬಂದಿರುವ ಹನುಮವ್ವ ಇವರೆಲ್ಲರದ್ದು ತೊಳಲಾಟವೇ ಆದರೂ ಅದರಾಚೆಗೆ ಬದುಕಿನ ಶೋಧ ಕ್ರಿಯೆಯನ್ನು ನಡೆಸುತ್ತಾರೆ. ತಮ್ಮ ಸಮಸ್ಯೆಗಳಿಂದ ಮುಕ್ತಿ ಪಡೆಯಲು, ಮೇಲೇಳಲು ಒಬ್ಬರಿಗೊಬ್ಬರು ಆತುಕೊಳ್ಳುತ್ತಾರೆ. ಇಲ್ಲಿ ಜಾತ್ರೆ ಜೊತೆಜೊತೆಗೆ ಮನುಷ್ಯನ ಜೀವನ ಯಾತ್ರೆಯ ಮಿಂಚುಗಳನ್ನು ಹೊಳೆಯಿಸುವ ಅಪೂರ್ವತೆಯನ್ನು ಕಾಣಬಹುದು.

ಪರಿಶುದ್ಧವಾದ ಕನ್ನಡಿಯಲ್ಲಿ ಬಿಂಬವು ಮಂಕಾದಂತೆ ಇಲ್ಲಿನ ಸಂಬಂಧಗಳು ಕೆಲವೊಮ್ಮೆ ಮಾಸಿ ಹೋಗುತ್ತವೆ. ಅಣ್ಣ–ತಮ್ಮಂದಿರು ಬೆಳೆಯುತ್ತಾ ಹೋದಂತೆ ಸಂಬಂಧ ವ್ಯವಹಾರದ ದಿಕ್ಕಾಗಿ ಬದಲಾಗುವ ಪರಿ ವಿಷಾದನೀಯ. ಒಂದು ತಲೆಮಾರಿಗೆ ತಾನು ಬದುಕು ಸವೆಸಿದ ಮುರಿದ ಮನೆ ಹಳೆಯ ವಸ್ತುಗಳ ಮೇಲೆ ವ್ಯಾಮೋಹವಿದ್ದರೆ ಇನ್ನೊಂದು ತಲೆಮಾರಿಗೆ ಮನೆಯಲ್ಲಿರುವ ಹಳೆಯ ವಸ್ತುಗಳ ಮೇಲೆ ತಾತ್ಸರ ಹುಟ್ಟುತ್ತದೆ. ಜೀರ್ಣವಾದದನ್ನು ಅಟ್ಟಕ್ಕೇರಿಸಿ ಹೊಸದನ್ನು ತರುವುದರಲ್ಲಿ ನಿರತರಾಗುತ್ತಾರೆ. ಇನ್ನು ಬೆಲೆಬಾಳುವ ವಸ್ತುಗಳನ್ನು ಭದ್ರವಾಗಿ ಕಟ್ಟಿ ಯಾರ ಕಣ್ಣಿಗೂ ಕಾಣದಂತೆ ಗಂಟಿಕ್ಕಿ ಮೂಲೆಗೆ ಸೇರಿಸುತ್ತಾರೆ. ಹೀಗೆ ಲೇಖಕರು ನಮ್ಮೊಳಗಿನ ಬೇಕು ಬೇಡಗಳ ಅಸ್ತಿತ್ವವನ್ನು ನವಿರಾದ ಓದುಗನ ಮುಂದಿಡುತ್ತಾರೆ. ಭಾಷಾ ಹಂದರದಿಂದಲೇ ಸೂಕ್ಷ್ಮವಾಗಿ ಪ್ರಶ್ನಿಸುತ್ತಾರೆ.

ಇಲ್ಲಿನ ಕಥೆಗಳಲ್ಲಿ ಸ್ತ್ರೀ ಚಿತ್ರಣವು ಮಹತ್ವದ ಪಾತ್ರವನ್ನು ವಹಿಸುತ್ತವೆ. ಹೆಣ್ಣಿನ ವ್ಯಕ್ತಿತ್ವವೇ ಆಕೆಯ

ಬದುಕಿಗೆ ಹೊಸ ಶಕ್ತಿಯನ್ನು ತಂದುಕೊಡುತ್ತದೆ ಎಂಬುದನ್ನು ಧ್ವನಿಸುತ್ತದೆ. ಇಲ್ಲಿನ ಬಹುಪಾಲು ಕಥೆಗಳಲ್ಲಿ ಸ್ತ್ರೀ ಪಾತ್ರಗಳು ತಮ್ಮ ವ್ಯಕ್ತಿತ್ವಗಳಿಂದ ತನ್ನ ಸುತ್ತಲಿನ ಜಗತ್ತನ್ನು ಪ್ರಭಾವಿಸುತ್ತವೆ ಮತ್ತು ರೂಪಿಸುತ್ತವೆ. ಕಡಲ ತೆರೆಗೆ ದಂಡೆಯ ಭೀಮಕ್ಕ, ನೀಲಿ ಆಕಾಶದ ಹಣ್ಣುವಿನ ಹೂವಿ ಇವರೆಲ್ಲರೂ ಕೂಡ ತಮ್ಮ ಬದುಕನ್ನು ಹೋರಾಟದಲ್ಲಿ ಕಟ್ಟಿಕೊಳ್ಳುತ್ತಲೇ ತಮ್ಮ ಸಂಪರ್ಕಕ್ಕೆ ಬಂದವರ ಬದುಕಿಗೂ ಚೈತನ್ಯವನ್ನು ನೀಡುವಲ್ಲಿ ಸಫಲವಾಗುತ್ತಾರೆ. ತಾಯಿಯಾಗಿ, ಹೆಂಡತಿಯಾಗಿ, ಗೆಳತಿಯಾಗಿ, ಪ್ರಿಯತಮೆಯಾಗಿ ಬೆಳಕಿನ ಭರವಸೆಯನ್ನು ತುಂಬುತ್ತಾರೆ.

ಕಥಾ ಸಂಕಲನದ ಒಂದೊಂದೆ ಕಥೆಗಳನ್ನು ಒಳಹೊತ್ತಿ ನೋಡಿದಾಗ ಲೋಕದ್ದೆ ಒಂದು ದಾರಿಯಾದರೆ 'ಅಕಥ ಕಥಾ' ಕಥೆಯಲ್ಲಿನ ಕಥಾನಾಯಕನ ಆಯ್ಕೆ ದಾರಿಯ ಬೇರೆ. ಯಾವುದೇ ಬಂಧನಗಳಿಲ್ಲದೆ ಸಂಬಂಧಗಳಿಂದ ಮುಕ್ತನಾಗಿ ಆ ಕ್ಷಣಕ್ಕೆ ತನಗೆ ಬೇಕಾದಂತೆ ಬದುಕುವವನು. ಬಂಡುಕೋರಿತನದ ಸ್ವಭಾವಉಳ್ಳವನು. ಆದರೆ ಸ್ನೇಹಿತ ನಂದಕಿಶೋರನ ಗೆಳೆತನದೊಂದಿಗೆ ಜೀವ ಹಸನಾಗಿಸಿಕೊಳ್ಳುತ್ತಾನೆ. ಯಾವುದೇ ಉದ್ಯೋಗ ಸೇರಿದರು ಒಂದಷ್ಟು ಕಾಲ ಕೆಲಸ ಮಾಡಿ ಕಿರಿಕಿರಿ ಮಾಡಿಕೊಂಡು ಅರ್ಧಕ್ಕೆ ಕೈಬಿಡುತ್ತಾನೆ. ನೇರ, ಸರಳ, ಪಾರದರ್ಶಕತೆಯಂತಹ ಆತನ ಸ್ವಭಾವಗಳೆ ಇದಕ್ಕೆ ಕಾರಣ. ಆದರೆ ಆತನ ಗೆಳೆಯ ನಂದಕಿಶೋರ ಗೋಜಲು, ಸಂಕೀರ್ಣ, ಶಿಷ್ಟಾಚಾರಗಳನ್ನು ಒಳಗೊಂಡ ಒಣಪ್ರತಿಷ್ಠೆಯ ಸ್ವಭಾವದವನು.

ಸಿದ್ದರು. ನಾಥರು, ಸೂಫಿಗಳನ್ನು ಕುರಿತು ಅಧ್ಯಯನ ಮಾಡಲು ಹೊರದೇಶದಿಂದ ಬಂದ ಸುಲೊಮಿಯ ಮೇಹಿಯಾ ಮತ್ತು ಅವಳ ಸಹಾಯಕ್ಕಾಗಿ ಬಂದ ಋತುಚ ಎನ್ನುವ ಕಿರಿಯ ಸಂಶೋಧನ ವಿದ್ಯಾರ್ಥಿನಿ ಇವರು ಭಾರತದ ಭಕ್ತಿ ಪಂಥದ ಕೇಂದ್ರಗಳುದ್ದಕ್ಕೂ ಸಂಚರಿಸಿ ವಿಷಯವನ್ನು ಸಂಗ್ರಹಿಸಲು ಪ್ರಮೋದನ ನೆರವನ್ನು ಪಡೆಯುತ್ತಾರೆ. ಈ ಸಂಶೋಧನೆ ನಿಮಿತ್ತವಾದರೂ ಭಕ್ತಿ ಕೇಂದ್ರಗಳಿಗೆ ಭೇಟಿ ನೀಡಿದಂತೆಲ್ಲ ಪ್ರಮೋದನಲ್ಲಿ ಅಂತರ್ಯದ ಕಣ್ಣು ತೆರೆದುಕೊಳ್ಳುತ್ತದೆ.

ಸುಲೊಮಿಯ ಮೇಹಿಯಾ 'ಬದುಕಿನ ಒಳಾರ್ಥ ತಿಳಿಯಲು ಅತ್ಮ ಸಾಕ್ಷಾತ್ಕಾರ ಅರಿಯಲು ಭಾರತವೇ ಹೇಳಿ ಮಾಡಿಸಿದ ಜಾಗ' ಎಂದಾಗ ಆತನ ಮನಸ್ಸಿನಲ್ಲಿ ಆಕೆಯ ಬಗೆಗೆ ಹೆಮ್ಮೆ ಎನಿಸುತ್ತದೆ. ವಿಚಾರಿಶಕ್ತಿ, ಭೌತಿಕತೆ, ಪ್ರಾಮಾಣಿಕತೆ, ಭೌತಿಕ ಲೋಕದ ವಿಷಯವಸ್ತುಗಳ ಮೇಲೆ ಅದಮ್ಯ ನಿರ್ಲಕ್ಷ್ಯ ಮೊದಲಾದ ವಿಷಯಗಳು ಹಂತ ಹಂತವಾಗಿ ಪ್ರಮೋದನನ್ನು ಅವಳತ್ತ ಸೆಳೆಯುತ್ತದೆ.

ಜೀವನದ ತಿಕ್ಕಾಟವನ್ನು ಹುಟ್ಟು ಹಾಕುವ ನೈತಿಕ ಮುಖವಾಡವನ್ನು ಹೊದ್ದ ಕಾಮದ ಗೊಂಡಾರಣ್ಯದಲ್ಲಿನ ಭಯಾನಕ ಪ್ರಯಾಣವನ್ನು ಹಲವು ಪರ್ಯಾಯ ಮಾರ್ಗಗಳಿಂದ ಶಮನಗೊಳಿಸುವ ಹಾಗೂ ಮಿತಿಮೀರಿದ ಆಸೆಗಳನ್ನು ಶುಚಿಯಾಗಿಸಿಕೊಳ್ಳುವಲ್ಲಿ ಮನುಷ್ಯ ತನ್ನ ಅಂತರಂಗದಲ್ಲಿ ವಿಧಿಸಿಕೊಳ್ಳಬಹುದಾದ ಅರಿವು ಇವು ಬಹಳ ಸ್ವಚ್ಚಂದವಾಗಿ ಕಥೆಯಲ್ಲಿ ನಿರೂಪಿತಗೊಂಡಿದೆ. ಸುಲೋಮಿ ಮೇಹಿಯಾ ಆಕೆಯೊಂದಿಗೆ ಒಂದು ಊರಿನಿಂದ ಇನ್ನೊಂದು ಊರಿಗೆ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ, ಒಂದು ಅನುಭವದಿಂದ ಇನ್ನೊಂದು ಅನುಭವಕ್ಕೆ ತೆರೆದುಕೊಳ್ಳುತ್ತಾ ಹೋದಂತೆ ತನಗರಿವಿಲ್ಲದೆಯೇ ಕಥಾನಾಯಕನ ಅಂತರಾಳದಲ್ಲಿ ಬದಲಾವಣೆ ಘಟಿಸುತ್ತದೆ. ಕಂಡ ಕಂಡವರ ಜೊತೆ ಜಗಳವಾಡುತ್ತಾ ನೌಕರಿಯನ್ನು ಬದಲಾಯಿಸುತ್ತ ಜೀವನದ ಗೊತ್ತುಗುರಿಗಳಿಲ್ಲದ ಪ್ರಮೋದನಿಗೆ ಸಾಧು, ಸಿದ್ದರ ಒಡನಾಟ ಅವನೊಳಗೆ ಬಹಳಷ್ಟು ಬದಲಾವಣೆಯನ್ನು ತರುತ್ತದೆ. "ನಿರ್ಗುಣ ನಿರಾಕಾರದ ಹುಡುಕಾಟ ಈ ಲೋಕದೊಳಗೆ ಸಾಧು–ಸಂತರ ಹೊತ್ತಲ್ಲದೆ ತಿಳಿಯಲು ಸಾಧ್ಯವಿಲ್ಲ ಒಳಗಿಣ ಮೃದುತ್ವ ಸಹನೆ ಹಿಡಿದು ನಡೆಸುವ

ಉದಾರತೆ ಸಾತ್ವಿಕತೆಯಿಂದ ತುಂಬಿದ ಬಿಡುಗಡೆಗೆ ಬಯಸುವ ಪಯಣದ ಅನುಭವ, ಅಲ್ಲಿ ಗುರುವಿಗೆ ಪಾರಮ್ಯ ಸ್ಥಾನ ಗುರುತಿಸಲು ಬದುಕಿನ ಮೋಕ್ಷದ ಗುಟ್ಟುಗಳು"[1] ಅಲ್ಲಿನ ಪರಿಪೂರ್ಣತೆ ಕ್ರಮೇಣವಾಗಿ ಪ್ರಮೋದನಿಗೆ ಗೋಚರಿಸುತ್ತದೆ

ಈ ಸಂಘದಲ್ಲಿ ಅಂಗವನ್ನು ಮೀರುವ ಕಡೆಗೆ ಪ್ರಮೋದನ ಮನಸ್ಸು ಪಕ್ವವಾಗುತ್ತದೆ. ಈ ಸುದೀರ್ಘ ಮೌನದಲ್ಲಿ ಅವನ ದೇಹದ ಹಮ್ಮು–ಬಿಮ್ಮುಗಳು ಕರಗಿ ಆಕಾಶದಂತೆ ಶುಭ್ರವಾಗುತ್ತದೆ. ಕೆಲವೊಮ್ಮೆ ಜೀವನಕ್ಕೆ ಹತ್ತಿರವಾದವು ವ್ಯಸನದಂತಾಗಿ ಮತ್ತೆ ಕೆಲವೇ ದಿನಗಳಲ್ಲಿ ಎಲ್ಲದರ ಕುರಿತು ಆಸಕ್ತಿ ಹೊರಟು ಹೋಗುವ ರೀತಿಯೇ ಇದು ಒಂದು ಎಂಬ ಸಂದೇಹವು ಆತನಲ್ಲಿ ಆರಂಭದಲ್ಲಿ ಮೂಡಿದ್ದು ಉಂಟು. ದಕ್ಷಿಣದ ಅನುಭವಿಗಳ ಜೊತೆಗಿನ ಅನುಭವ ಒಂದು ರೀತಿಯಾದರೆ, ಉತ್ತರದ ಕಡೆಗಿನ ಸಂಚಾರ ಬೇರೆ ಅರಿವನ್ನು ನೀಡುತ್ತದೆ. ಅತಿಯಾದ ದಂಡನೆ, ಹಠಯೋಗ, ಮಂತ್ರ–ತಂತ್ರಗಳ ಸಿದ್ಧಿ ಸಾಧನೆಗಳಿಗೆ ನಂಬಿಕೆ ಒಂದು ಕಡೆಯಾದರೆ ಮತ್ತೊಂದು ಕಡೆ ಧ್ಯಾನ ಪೂಜೆಗಳಲ್ಲಿ ನಂಬಿಕೆ. ಇಲ್ಲಿ ಮಾರ್ಗ ಬೇರೆಯಾದರೂ ಅಂತಿಮ ಗುರಿ ಇಬ್ಬರಲ್ಲೂ ಒಂದೆ. ಭಾಗವಾಗಿದ್ದರೆ ಪ್ರಮೋದನಿಗೆ ಇದೊಂದು ಹೊಸ ಲೌಕಿಕತೆಯಾಚೆಗಿನ ಅಲೋಹಿಕತೆಯ ಹುಡುಕಾಟವೆ ಆಗಿರುತ್ತದೆ.

**“**ಕೊನೆಗೆ ಭೌತಿಕತೆಯಲ್ಲಿ ಮುಳುಗಿದ ಪ್ರಮೋದ "ಕಬೀರರ ದೋಹವನ್ನು, ತುಳಸೀಯ ರಾಮಾಯಣವನ್ನ ಕೇಳಬೇಕೆಂದರೆ ಬಾಬಾ ಲಕುಮನ ಬೈರಾಗಿ ಅವರ ಬಾಯಿಯಿಂದನೇ ಕೇಳಬೇಕು"[2] ಎಂದು ಕಬೀರ ಸಾಹಿತ್ಯದ ವಿದ್ವಾಂಸ ಪ್ರೊಫೆಸರ್ ನಿರ್ಮಲ ಸಿಂಹ ಇಟಾನಿ ಅವರು ಹೇಳಿದ ಮಾತಿಗೆ ಹಳ್ಳಿಯಾಗಲಿ, ರಸ್ತೆಗಳಾಗಲಿ ಇಲ್ಲದ ಕಾಡಿನಲ್ಲಿ ಎರಡು ದಿನ ಹುಡುಕಾಡಿ ದರ್ಶನ ಪಡೆದ ಸಾಧುವಿನ ಸ್ವಾಭಿಮಾನದಲ್ಲಿ ಕಠಿಣ ಅಮೃತದಂತೆ ಬದುಕಿದ ತನ್ನ ತಾಯಿಯನ್ನು ನೆನೆದ. ಒಂಟಿಯಾಗಿ ಎಷ್ಟು ಕಷ್ಟ ಬಂದರೂ ಯಾರಿಗೂ ಕೈ ಚಾಚದ ಬಗ್ಗೆ ಯೋಚಿಸುತ್ತಾನೆ. ಸೊಕ್ಕಿದ ಆನೆಯಂತಿದ್ದ ಅವನ ಮನಸ್ಸು ವಿಶ್ರಾಂತಿ ಪಡೆಯುತ್ತದೆ. ಅಲ್ಲಿನ ದೀಪದ ಬೆಳಕಿನ ದೀರ್ಘ ಮೌನ ಆತನ ಇಡಿ ಶರೀರವನ್ನು ಅವರಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ ಆ ಗೋರಕ್ಷನಾಥರ ಸಾನಿಧ್ಯದಲ್ಲಿ ಪಡೆದ ಆರೈಕೆ ಅವನಲ್ಲಿ ಹೊಸ ಬದುಕಿನ ಆಯ್ಕೆಯನ್ನು ತೆರೆದಿಡುತ್ತದೆ. ಹೀಗೆ ಕಥಾನಾಯಕನ ಅಂತರಿಕ ಹುಡುಕಾಟದಲ್ಲಿ ಬದುಕಿನ ತಿರುವು ಭಿನ್ನ–ಭಿನ್ನ ಸ್ವರೂಪ ಪಡೆದುಕೊಳ್ಳುತ್ತದೆ.

ಇನ್ನೊಂದು ಕಥೆ ’ಅತಿಲೋಕ ಸುಂದರಿ’ ಕಥೆಯು ಜೀವನದ ಸಮಸ್ಯೆಗಳ ಜಟಿಲತೆಯಲ್ಲಿ ಸುತ್ತಲೂ ಕತ್ತಲು ಆವರಿಸಿದರೂ ಉರಿಯುವ ಮಂದ ಬೆಳಕೆ ಇಡೀ ಜೀವನವನ್ನು ತಿರುವುಗೊಳಿಸಿ ಹೊಸತನವನ್ನು ರೂಪಿಸುತ್ತದೆ. ಆದರೆ ಆ ಬೆಳಕನ್ನು ತಾತ್ಸಾರ ಮಾಡದೆ ಅದರತ್ತ ಮುಖ ಮಾಡುವ ಮನಸ್ಸು ಇರಬೇಕು ಎಂಬುದನ್ನು ಧ್ವನಿಸುತ್ತದೆ. ಇಲ್ಲಿನ ಕಥಾನಾಯಕಿಗೆ ಈ ತೆರನಾದ ಅವಕಾಶ ಲಭಿಸುತ್ತದೆ. ಆಕೆ ಸಿಕ್ಕ ಅವಕಾಶ ಬಳಸಿಯೇ ತೀರಬೇಕು. ವಿಷಯುಕ್ತ ಕಹಿ ಘಟನೆಗಳ ಮರೆತು ಹೊಸ ಬದುಕಿನ ಆರಂಭಕ್ಕೆ ಒಗ್ಗಿಕೊಳ್ಳುವ ಅನಿವಾರ್ಯತೆ ಆಕೆಗಿದೆ. ಗಂಡನನ್ನು ಕಳೆದುಕೊಂಡ ಒಂಟಿ ಜೀವ ಸಂಕಲಮ್ಮ ತನ್ನ ಮಕ್ಕಳನ್ನು ಈ ಸಮಾಜದ ಕ್ರೌರ್ಯದ ಕಣ್ಣುಗಳಿಂದ ಮರೆಮಾಡಿ ಸಾಕುವುದು ತ್ರಾಸವೆ.

ಮುತಾಮೇಸ್ತ್ರಿಯ ಹೀನಾಯ ನಡವಳಿಕೆ, ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಅವಾಚ್ಯ ಶಬ್ದಗಳ ವರ್ತನೆ ಸಹಿಸಲು ಅಸಾಧ್ಯವಾದರೂ ಅಲ್ಲಿನ ಕೆಲ ಹೆಣ್ಣು ಮಕ್ಕಳು ಧ್ವನಿ ಎತ್ತದೆ ಸಿಗುವ ಕಾಸಿಗಾಗಿ ಮತ್ತು ಸೂರಿಗಾಗಿ ಸಹಿಸುತ್ತಿದ್ದರು. ಅವರ ಗಂಡಂದಿರು ಹೆಂಡತಿಗೆ ಸಿಕ್ಕ ಹಣವನ್ನ ಕಸಿದು ಹೆಂಡದಂಗಡಿಯ ದಾಸರಾಗಿದ್ದರು. ಈ ಅಸಹಾಯಕತೆಯನು ದಾಳವಾಗಿ ಬಳಸುವ ಮೇಸ್ತ್ರಿಯಂತಹ ಪಾತ್ರ ಸಮಾಜದಲ್ಲಿ ಇಂದಿಗೂ ನೋಡಬಹುದು. ಇಷ್ಟವಿಲ್ಲದೆ ಆತನ ಬಲವಂತಿಕೆಗೆ

ಮದುವೆಯಾದ ಮಂಗಮ್ಮ ನಂತರ ನರಕ ಯಾತನೆಯಲ್ಲಿ ಮಂಕಾಗಿ ಅಸ್ವಸ್ಥಳಾಗುತ್ತಾಳೆ. ಅವಳ ಕನಸಿನ ಸ್ವಚ್ಛಂದದ ಆಕಾಶದ ಚುಕ್ಕೆಗಳು ಮುಂದೆ ದುಃಸ್ವಪ್ನಗಳಾಗುತ್ತವೆ. ಎಷ್ಟರಮಟ್ಟಿಗೆಯೆಂದರೆ ಆಕೆ ನಿತ್ರಾಣಗೊಂಡು ವಿಷ ಗಂಟಲಿನವರೆಗೂ ಏರಿದಂತಾಗುತ್ತದೆ. ಇದರಿಂದ ರೋಸತ್ತ ಮಂಗಮ್ಮ ಮುಂದೆ ತನ್ನ ಕರುಳ ಕುಡಿಯನ್ನು ನಿರಾಕರಿಸುತ್ತಾಳೆ. ಆದರೆ ಮಗುವಿನ ಉಸಿರು ಆಕೆಯ ಉಸಿರಿನೊಂದಿಗೆ ಬೆರೆತು ಅತಿತ್ತ ಸರಿಯುತ್ತಾ ಅದೃಶ್ಯ ಅಮೃತದ ಚಿಲುಮೆಯ ಮೊಲೆ ತೊಟ್ಟನ್ನು ಅದುಮಿಟ್ಟು ಹಾಲು ಹೀರುವಾಗ ಮಂಗಮ್ಮ ತನ್ನ ಹಿಂದಿನ ಎಲ್ಲಾ ನೋವು ನರಕದ ದಿನಗಳನ್ನು ಮರೆತು ಆ ಭಾವಕ್ಕೆ ಪರವಶವಾಗುತ್ತಾಳೆ. ಇತ್ತ ಮೇಸ್ತ್ರಿ ತನಗೆ ಹೆಣ್ಣು ಮಗು ಜನಿಸಿದ್ದನ್ನು ಕೇಳಿ ಆತನಲ್ಲಿ ಪಾಪ ಪ್ರಜ್ಞೆ ಕಾಡುತ್ತದೆ. ಮಗಳನ್ನು ತಬ್ಬಿಕೊಂಡಾಗ ತನ್ನ ಬಗ್ಗೆ ಅಸಹ್ಯ ಉಂಟಾಗಿ ಕಣ್ಣು ತುಂಬಿ ಹೋಗುತ್ತದೆ. ಮಾತುಗಳು ದುಃಖದಿಂದ ತಡವರಿಸುತ್ತದೆ. ಆ ಹೆಣ್ಣು ಕೂಸು ಕ್ರೂರ ಮನಸ್ಸಿಗೆ ಅತೀವವಾದ ಸುಂದರ ಸ್ಪರ್ಶವನ್ನು ನೀಡುತ್ತದೆ.

'ವೈಶಾಖದ ದಿನಗಳು' ಕಥೆಯಲ್ಲಿ ಯಾವುದೇ ಗಳಿಗೆಯಲ್ಲಾದರೂ ತೆರೆದುಕೊಳ್ಳಲಿರುವ ಬೆಳಕಿನ ಮುಂದೆ ಕತ್ತಲು ಹೊರಟೆ ಅನ್ನುವ ದಾವಂತದ ಚಿತ್ರಣವಿದೆ. ಕಥೆಯ ಆರಂಭದ ಸಾಲುಗಳೆ ಬದಲಾವಣೆಯ ಸೂಚನೆಯನ್ನು ನೀಡುತ್ತದೆ. ಮೂರು ವರ್ಷಗಳ ನಂತರ ಸಂಸಾರ ಸಮೇತವಾಗಿ ಊರಿಗೆ ಹೋಗುತ್ತಿರುವ ವಿನಾಯಕರ ಮನಸ್ಸಿನಲ್ಲಿ ಏನೋ ಗೊತ್ತಿಲ್ಲ ಸಾಂಪ್ರದಾಯ, ಶಿಸ್ತು, ಕಟ್ಟುನಿಟ್ಟಿನ ಆಚರಣೆಗಳು ಒಂದು ಕಾಲಕ್ಕೆ ಸಮ್ಮತವಾದರೆ ಮತ್ತೊಂದು ಕಾಲಕ್ಕೆ ಜಾಳೆನಿಸುತ್ತದೆ. ಒಂದು ತಲೆಮಾರಿಗೆ ಬೇಕು ಎನಿಸಿದವು ಇನ್ನೊಂದು ತಲೆಮಾರಿಗೆ ಬೇಡವಾಗುತ್ತದೆ. ಇಲ್ಲಿ ತಂದೆ ಮತ್ತು ಮಗನ ಆಸಕ್ತಿ, ಯೋಚನೆ, ಅನುಸರಣೆ ಮಾರ್ಗ ಎಲ್ಲವೂ ಭಿನ್ನ. ಇದರಿಂದ ಆಗಾಗ ಇರಿಸು ಮುರಿಸುಗಳಾಗುತ್ತವೆ. ದೀಕ್ಷಿತರು ಆಸ್ತಿಕರು, ವಿನಾಯಕರು ನಾಸ್ತಿಕರು. ಇಬ್ಬರ ಆಲೋಚನೆ ಭಿನ್ನಾಭಿಪ್ರಾಯಗಳ ಮೂಲ ಸ್ವರೂಪ, ಸ್ವರೂಪದ ಆಳ ಬಹಳ ಜಟಿಲವಾಗಿರುತ್ತದೆ. ಗೆಳೆಯರು, ಅಜ್ಜಿ ಅಜ್ಜಿಯನಂಟು, ಕಾಡಿನ ಸುತ್ತಾಟ ಎಲ್ಲವೂ ವಿನಾಯಕರ ಮಕ್ಕಳಲ್ಲಿ ಆಪ್ತತನ ಉಂಟುಮಾಡುತ್ತದೆ. ಹೀಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಆಗುವ ಸ್ಥಿತ್ಯಂತರಗಳು ಭಾವಗಳ ಮೇಲೆ ಬೀರಬಹುದಾದ ಪರಿಣಾಮವನ್ನು ಬಹಳ ಅಚ್ಚುಕಟ್ಟಾಗಿ ಈ ಕಥೆ ಹಿಡಿದಿಡುತ್ತದೆ.

ಕಥೆಗಾರರು ಪಾತ್ರವೊಂದನ್ನು ನಮ್ಮೆದುರು ಇಡುವ ರೀತಿ ತುಂಬಾ ಸುಂದರ. ಅವರು ಆ ಪಾತ್ರದ ವಿವರವನ್ನು ಸಂಪೂರ್ಣವಾಗಿ ತೆರೆದಿಡುವುದಿಲ್ಲ. ಅವರೊಳಗೆ ಹುಟ್ಟಿದ ಆ ಪಾತ್ರ ನಮ್ಮೊಳಗೆ ನಮ್ಮದೇ ರೀತಿಯಲ್ಲಿ ರೂಪ ಪಡೆಯುತ್ತದೆ. ಹಾಗಾಗಿ ಅವು ಅವರದ್ದು ಮಾತ್ರವಲ್ಲ, ಕೆಲವು ನಮ್ಮದೇ ಪಾತ್ರಗಳೂ ಆಗುತ್ತವೆ.

ಮಾತು ಯಾತನೆಯ ದಿಡ್ಡಿ ಬಾಗಿಲು' ಕತೆಯ ಮಿಲಿಂದ; 'ಅಕಥ ಕಥಾ' ಕತೆಯ ಪ್ರಮೋದ; 'ವೈಶಾಖದ ದಿನಗಳು' ಕತೆಯ ವಿನಾಯಕ; 'ಅಗಮ್ಯ ಅಗೋಚರ ಅಪ್ರತಿಮ ಜೀವವೇ' ಕತೆಯ ಇಂದುಮತಿ ಪಾತ್ರಗಳು ಮುಂಬಯಿ, ಬೇರೆ ನಗರಗಳು ಮತ್ತು ಹುಟ್ಟಿದೂರಿನ ನಡುವೆ ಜೋಕಾಲಿಯಾಡುತ್ತವೆ. ತನ್ನ ಉದ್ಯೋಗದಲ್ಲಿ ಅನುಭವಿಸುವ ಡೆಡ್ ಲೈನ್'ಗಳ ಒತ್ತಡ, ಉದ್ಯೋಗದ ಜೊತೆಗೆ ವೈಯಕ್ತಿಕ ಬದುಕನ್ನು ಸರಿದೂಗಿಸುವ ಸಾಹಸದ ಕುರಿತು, ಅನುಭವಿಸುವ ತಲ್ಲಣಗಳ ಸೊಗಸಾದ ಪ್ರಸ್ತಾಪವಿದೆ. ಸಾಫ್ಟ್ ವೇರ್ ಎಂಬ ಖಾಸಗಿ ಔದ್ಯೋಗಿಕ ಬದುಕಿನ ತಲ್ಲಣ ತುಮುಲಗಳಿವೆ. ಅಲ್ಲಿ ಡೆಡ್ ಲೈನ್'ಗಳು ಬದುಕಿನ ನಿರ್ಣಾಯಕ ಲಕ್ಷಣ ರೇಖೆಗಳಾಗಿವೆ. ಟೀಮ್ ವರ್ಕ್ ಎಂಬ ಕುರಿಮಂದೆ, ಪ್ರೊಜೆಕ್ಟ್ ಕಂಪ್ಲೇಷನ್ ಎಂಬ ತಪಸ್ಸು ಮುಕ್ತಿಗಳಿವೆ. ಸಾಫ್ಟ್ ವೇರ್ ಜಗತ್ತಿನ ಹಾರ್ಡ್ ಲೈಫಿನ ಬವಣೆಗಳನ್ನು ಅವುಗಳ ಮೂಲ

ನೆಲೆಯಲ್ಲಿಯೇ ಚಿತ್ರಿಸುವ ತಂತ್ರಗಾರಿಗೆ ಮಳಗಿಯವರಲ್ಲಿದೆ.

ಲಿವಿಂಗ್ ಟುಗೆದರ್ ಫಾರೆವರ್ ಎಂಬ ಫಾರ್ಮೂಲಾಗಳನ್ನು ಇಟ್ಟುಕೊಂಡು ಶುರುವಾಗುವ ಸಂಬಂಧಗಳನ್ನು, 'ಅಗಮ್ಯ ಅಗೋಚರ ಅಪ್ರತಿಮ ಜೀವವೇ' ಕತೆಯಲ್ಲಿ ಇಂದುಮತಿ ಮತ್ತು ಸಮೀರನ ಪಾತ್ರಗಳ ಮೂಲಕ ಸಹಜ ಎನ್ನುವ ಹಾಗೆ ಚಿತ್ರಿಸುತ್ತಾರೆ. ಕಥೆಗಳನ್ನು ಹೀಗೂ ಬರೆಯಬಹುದೇ? ಇರಬಹುದೇ? ಅನ್ನಿಸುವುದನ್ನು ಹಾಗೇ ಹಸಿಹಸಿಯಾಗೇ ಹೇಳಿಬಿಡಬಹುದೇ? ಓದುವಾಗ ಹಲವು ಬಾರಿ ಮೂಡಿ ಹುಬ್ಬೇರುವಂತೆ ಮಾಡಿದ ಈ ಪ್ರಶ್ನೆಗಳಿಗೆ ಇವರ ಇಂತಹ ಕಥೆಗಳೇ ಹೌದೆನ್ನುವಂತೆ ತಲೆದೂಗುತ್ತವೆ.

ಕತೆಯ ಕೊನೆಯಲ್ಲಿ ಚಂದ್ರವ್ವ ರಥೋತ್ಸವವನ್ನು ನೋಡುತ್ತಾ, ನಿಂತಲ್ಲಿಯೇ ತನ್ನ ಜೀವನದ ಪರಿಪಾಟಲುಗಳು ಕರಗಿದಂತೆ ಗೆಲುವಾಗಿದ್ದಳು. "ಕಲ್ಲು ಬಂಡೆಯ ನಡುವೆ ಚಿಗುರುವ ವಿಸ್ಮಯದ ಹೂವಿನ ಕುಡಿಯಂತೆ ಬೆಳೆಯುತ್ತಿದ್ದೇನೆ. ಎನ್ನುವ ಭಾವ ಮೈತುಂಬಿ ಅವಳನ್ನು ಬೆಚ್ಚಗಾಗಿಸಿತು. ರಥೋತ್ಸವಕ್ಕೆ ದಿವ್ಯತೆಯನ್ನು ತರಲೆಂದು ಮಾತ್ರ ತೇರಿಗೆ ಹೂವಿನ ಮಳೆ ಸುರಿಸಲು ಒಟ್ಟುಗೂಡಿದ್ದ ಮೋಡಗಳು, ಆಕೆಯ ಮುಖ ಸವರಿ, ಉದಕ ಚಿಮುಕಿಸಿ ಅವಳನ್ನು ಮುಕ್ತಳನ್ನಾಗಿಸಿದವು"[3]

ಕೇಶವ ಮಳಗಿ ಅವರ ಕತೆಗಳಲ್ಲಿ ಸಮಸ್ಯೆಗಳ ಚಿತ್ರಣ ಮಾತ್ರವಲ್ಲ, ಆ ಸಮಸ್ಯೆಗಳಿಗೆ ಪರಿಹಾರವನ್ನು ಅರಸುವ ಪ್ರಯತ್ನವೂ ನಡೆಯುತ್ತದೆ. ಜನಸಾಮಾನ್ಯರು ಅಂದುಕೊಳ್ಳುವವರಲ್ಲಿ ಅಡಗಿರುವ ಅಪಾರ ಮಾನವೀಯ ಅಂಶ, ಧಾರಣಾಶಕ್ತಿ, ಬದುಕನ್ನು ಎಲ್ಲ ಘನತೆಯೊಂದಿಗೆ ಎದುರಿಸುವ ಆ ಅಸಾಮಾನ್ಯರ ಛಲವಂತಿಕೆಗಳು ಈ ಸಂಕಲನದ ಕಥೆಗಳಲ್ಲಿ ವಿಸ್ಮಯದಂತೆ ಅಡಗಿವೆ. ಈ ಸಾಮಾನ್ಯರಲ್ಲಿ ಹುದುಗಿರುವ ನಿಷ್ಕಲ್ಮಶ ಪ್ರೀತಿಯೇ ಒಂದು ಕ್ಷಣದಲ್ಲಿ ಅವರನ್ನು ದೈವಿಕದ ಎತ್ತರಕ್ಕೆ ಬೆಳೆಸುತ್ತದೆ. ಯಾವುದೇ ತೋರಿಕೆ, ಅಪೇಕ್ಷೆ ಇಲ್ಲದ ಈ ಬಗೆಯ ಶುದ್ಧ ಪ್ರೀತಿ ಇಲ್ಲಿನ ಭಿತ್ತಿಯಾಗಿದೆ.

**ಕೊನೆ ಟಿಪ್ಪಣಿಗಳು**

1. ಕೇಶವ ಮಳಗಿ. *ಅ ಕಥ ಕಥ.* ಪುಟ. 6
2. *ಅದೇ.* ಪುಟ.8
3. ಕೇಶವ ಮಳಗಿ. *ಹೊಳೆ ಬದಿಯ ಬೆಡಗು*, ಪುಟ. 24

**ಪರಾಮರ್ಶನ ಗ್ರಂಥಗಳು**


- ಕೇಶವ ಮಳಗಿ. (2021). *ಅ ಕಥ ಕಥ.* ಸಂಗಾತ ಪುಸ್ತಕ.
- ಕೇಶವ ಮಳಗಿ. (2012). *ಹೊಳೆ ಬದಿಯ ಬೆಡಗು.* ಪ್ರೆಸ್ ಕ್ಲಬ್ ಪ್ರಕಾಶನ.
- ನಾಗರಾಜ್, ಡಿ. ಆರ್. (2013). *ಶಕ್ತಿ ಶಾರದೆಯ ಮೇಳ.* ಅಕ್ಷರ ಪ್ರಕಾಶನ.
- ರಹಮತ್ ತರೀಕೆರೆ. (1993). *ಪ್ರತಿ ಸಂಸ್ಕೃತಿ.* ಕನ್ನಡ ಸಂಘ ಕ್ರೈಸ್ಟ್ ಕಾಲೇಜ್.
- ಶಿರೂರ, ಬಿ.ವಿ. (2015). *ಸಂಶೋಧನಾ ಸ್ವರೂಪ.* ಅನ್ನಪೂರ್ಣ ಪ್ರಕಾಶನ.
- ಶಿವರುದ್ರಪ್ಪ, ಜಿ.ಎಸ್. (2019). *ಕನ್ನಡ ಸಾಹಿತ್ಯ ಸಮೀಕ್ಷೆ.* (14ನೇ ಮುದ್ರಣ) ಸಪ್ನ ಬುಕ್ ಹೌಸ್.
- ಶೇಷಗಿರಿರಾವ್, ಎಲ್.ಎಸ್. (2015). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪುಸ್ತಕ.